ಬರಗೂರು ರಾಮಚಂದ್ರಪ್ಪ

# ಅತಿಷ್ಟು ಒರತೆಯಾಗುವ ಗಾಂಧಿ

ಗಾಂಧೀಜಿ ಅವರ ಚಿಂತನೆಗಳು ಎಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತ. ನಮಗೆ ಬೇಕಾದ ಗಾಂಧೀಜಿಯನ್ನು ಹೊಸ ಬೆಳಕಿನಲ್ಲಿ ಕಾಣಿಸುವ ಈ ಲೇಖನ, ಯುವ ಲೇಖಕರಲ್ಲಿ ಗಾಂಧಿ ಕುರಿತಾಗಿ ಇರುವ ಗೊಂದಲಗಳನ್ನು ತಿಳಿಗೊಳಿಸುವಂತಿದೆ.

ಎಂದಿಗಿಂತ ಇಂದಿನ ದಿನಗಳಲ್ಲಿ ಗಾಂಧಿ ನೆನಪಾಗುತ್ತಾರೆ, ಕಾಡುತ್ತಾರೆ. ಇಂದಿನ ದಿನಗಳಲ್ಲಿ ನಮ್ಮ ದೇಶದ ಸ್ವಾಸ್ಥ್ಯವನ್ನು ಕೆಡಿಸಲೆಂದೇ ಕಾಡುತ್ತಿರುವ ಕಿಡಿಗೇಡಿತನ ಮತ್ತು ಸಮೂಹಸನ್ನಿ ಶೂರತ್ವಗಳು ಗಾಂಧಿ ನೆನಪು ಮತ್ತು ಕಾಡುವಿಕೆಗೆ ಕಾರಣವಾಗಿವೆ. ಜೈಶ್ರೀರಾಮ್ ಘೋಷಣೆಗಳು, ಹಿಂದೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಕೃತ್ಯಗಳು, ಇಸ್ಲಾಂ ಹೆಸರಿನ ಭಯೋತ್ಪಾದನೆಗಳು, ಒಟ್ಟಾರೆ ಧರ್ಮದ ಹೆಸರಿನಲ್ಲಿ ಸಂಭವಿಸುತ್ತಿರುವ ಅಧಾರ್ಮಿಕ ಹಾಗೂ ಅಮಾನವೀಯ ಹುನ್ನಾರಗಳು ಗಾಂಧಿ ಬದುಕಿನಲ್ಲಿ ಉತ್ತರ ಹುಡುಕಲು ಪ್ರೇರೇಪಿಸುತ್ತವೆ, ಗಾಂಧಿಯವರನ್ನು ಈ ಎಲ್ಲ ಹುನ್ನಾರಗಳ ಎದುರು ನಿಲ್ಲಿಸುತ್ತವೆ.

'ಜೈ ಶ್ರೀರಾಮ್' ಎಂದು ಸಲ್ಲದ ಕಡೆ, ಸಲ್ಲದ ರೀತಿಯಲ್ಲಿ ಘೋಷಣೆ ಕೂಗುವವರು ಒಮ್ಮೆ ಪೂರ್ವಗ್ರಹರಹಿತರಾಗಿ ಗಾಂಧಿ ನಡೆನುಡಿಯ ಕಡೆ ನೋಡ ಬೇಕು. ಗಾಂಧೀಜಿ ಅಪ್ಪಟ ಶ್ರೀರಾಮಭಕ್ತರು, ಶ್ರೀರಾಮ, ಅವರಿಗೆ ಬರೀ ದೇವರಾಗಿರಲಿಲ್ಲ. ಸುಖೀರಾಜ್ಯದ ರೂಪವಾಗಿದ್ದರಿಂದ 'ರಾಮರಾಜ್ಯ'ವೆಂಬ ಪರಿಕಲ್ಪನೆಯನ್ನು ಪ್ರತಿಪಾದಿಸಿದರು. ನಿತ್ಯವೂ 'ರಘುಪತಿ ರಾಘವ ರಾಜಾರಾಮ್, ಪತಿತ ಪಾವನ ಸೀತಾರಾಮ' ಎಂದು ಪ್ರಾರ್ಥಿಸುತ್ತಿದ್ದ ಅವರು ಪರವಾಗಿಯಾಗಲಿ, ವಿರುದ್ಧವಾಗಿಯಾಗಲಿ, ಯಾವತ್ತೂ 'ಜೈ ಶ್ರೀರಾಮ್' ಎಂದು ಘೋಷಣೆ ಕೂಗಲಿಲ್ಲ. ಗೋಡ್ಸೆ ಗುಂಡಿಗೆ ಬಲಿಯಾಗಿ ಪ್ರಾಣ ಬಿಡುವಾಗ 'ಹೇ ರಾಮ್' ಎಂದರು, ಅಷ್ಟೆ.